ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-6 Issue 4, January- February 2025, Pp. 32-41
©*IIMRD*, Mysuru
www.iimrd.com

# ಚಿಕ್ಕಪ್ಪ ಎಂಬ ಸರ್ವಾಧಿಕಾರಿ

**ಶಿವಕುಮಾರ್ ಜೆ[1] ಮತ್ತು ಡಾ. ಬಿ. ಪ್ರಭುಸ್ವಾಮಿ[2]**
[1]ಸಂಶೋಧನಾರ್ಥಿ; [2]ಸಹಾಯಕ ಪ್ರಧ್ಯಾಪಕರು
ಕನ್ನಡ ಸ್ನಾತಕೋತ್ತರ ಮತ್ತು ಸಂಶೋಧನಾ ವಿಭಾಗ, ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಮೈಸೂರು

**ಸಾರಾಂಶ: (Abstract)**

*ಒಂದು ಸಮಾಜದ ವ್ಯವಸ್ಥೆಯಲ್ಲಿ ಜನರು ತಮ್ಮದೇ ಆದ ಸಂಸ್ಕೃತಿ, ಆಚಾರ ವಿಚಾರಗಳೊಂದಿಗೆ ಜೀವನ ನಡೆಸುತ್ತಿರುತ್ತಾರೆ. ಅವರೊಳಗೆ ಸಣ್ಣನೆಯ ನೆಮ್ಮದಿ ನೆಲೆಯೂರಿರುತ್ತದೆ. ಅಂತಹ ಸಮಯದಲ್ಲಿ ನೆಮ್ಮದಿ ಕದಡುವ ವಿಷಯ, ವಿಚಾರಗಳು ಆ ಸಮಾಜದ ಮೇಲೆ ಬಿದ್ದಾಗ ಜೀವನದ ಸಂತಸವನ್ನು ದುಃಖಮಯವಾಗಿಸುತ್ತದೆ. ಅಂತಹ ಸನ್ನಿವೇಶ ಯಾವ ರೂಪದಲ್ಲಾದರೂ ಬಂದರೂ ಅದನ್ನು ಆ ಸಮಾಜ ಒಗ್ಗಟ್ಟಿನಿಂದ ಎದುರಿಸಿ ತಮ್ಮ ನೆಮ್ಮದಿಯನ್ನು ಕಾಪಾಡಿಕೊಳ್ಳಬೇಕು. ಇದು ಸಾಧ್ಯವಿರುವುದು ಒಗ್ಗಟ್ಟಿನಲ್ಲಿ ಮಾತ್ರವೇ ಆಗಿರುತ್ತದೆ. ಮುಖ್ಯವಾಗಿ ಜಾತಿ, ಧರ್ಮ ಇವುಗಳನ್ನು ಆಧಾರವಾಗಿಟ್ಟುಕೊಂಡು ಸಮಾಜದ ನೆಮ್ಮದಿಯನ್ನು ಕಸಿದುಕೊಳ್ಳುತ್ತಾ ವ್ಯಕ್ತಿಗತವಾಗಿ ತಾವು ಬೆಳೆಯಲು ಮುಂದಾಗುವ ಕೆಲವರು ಸಮಾಜವನ್ನು ಕಲುಷಿತಗೊಳಿಸುತ್ತಾರೆ.*

**ಮುಖ್ಯಪದಗಳು (Keywords):** ಚಿಕ್ಕಪ್ಪ, ರಾಧಾಕೃಷ್ಣ, ಸರ್ವಾಧಿಕಾರಿ, ಸೀತಾರಾಮ ಯರ್ಮುಂಜ, ರಜಾಕ್, ರಶೀದ್, ಹಿಂದೂ ಧರ್ಮ, ಉಪ್ಪಿನಂಗಡಿ, ಅಪರಿಚಿತ, ಕ್ರೌರ್ಯ, ಜಾತೀಯತೆ, ಧರ್ಮಾಂಧತೆ.

## ಪೀಠಿಕೆ

ಪ್ರತಿಯೊಂದು ಊರಿಗೂ ಅದರದ್ದೇ ಆದ ಚರಿತ್ರೆ ಇರುತ್ತದೆ. ಅಲ್ಲಿನ ಜನತೆ ತಮ್ಮ ಆಚಾರ ವಿಚಾರಗಳಿಗೆ ಅನುಗುಣವಾಗಿ ಜೀವಿಸುತ್ತಿರುತ್ತಾರೆ. ಆಚಾರ ವಿಚಾರ ಏನೇ ಇದ್ದರೂ ಅವಕ್ಕೆ ಅವರು ಗೌರವ ಕೊಡುತ್ತಾರೆ. ಅದರಂತೆ ಅವರ ಆಚಾರ ವಿಚಾರಗಳನ್ನು ಯಾರಾದರೂ ಬದಲಾಯಿಸಲು ಬಂದಾಗ ಅವರ ವಿರುದ್ಧ ಮಾತನಾಡಲು ಸಿದ್ಧರಾಗುತ್ತಾರೆ. ಅವರ ಹೋರಾಟ ಸಫಲವಾದರೆ ಸಂತೋಷಿಸುತ್ತಾರೆ. ಇಲ್ಲವಾದರೆ ದುಃಖಪಡುತ್ತಾ ತಮ್ಮ ಪಾಲಿಗೆ ಬಂದ ಜೀವನವನ್ನು ಸಾಗಿಸುತ್ತಾ ಹೋಗುತ್ತಾರೆ. 'ಪ್ರತಿಯೊಬ್ಬನೊಳಗೂ ಒಂದು ಹಳ್ಳಿ ಮತ್ತು ನಗರ ಇರುತ್ತದೆ. ನಗರದೊಳಗಿರುವವನ ಮನಸ್ಸಿನಲ್ಲಿ ಹಳ್ಳಿಯೂ ಹಳ್ಳಿಯೊಳಗಿರುವವನ ಮನಸ್ಸಿನಲ್ಲಿ ನಗರವೂ ನೆಲೆಯಾಗಿರುತ್ತದೆ. ಆತ ಒಳಜಗತ್ತಿನಲ್ಲೇ ಅಲ್ಲಿಂದಿಲ್ಲಿಗೆ ಇಲ್ಲಿಂದಿಲ್ಲಿಗೆ ಜಿಗಿಯುತ್ತಾ ಆ ಕ್ಷಣಕ್ಕೆ ಯಾವುದು ಅಪ್ಯಾಯಮಾನವೋ ಅಲ್ಲಿ ವಾಸಮಾಡುತ್ತಿರುತ್ತಾನೆ.'[1] ಎಂಬಂತೆ ಜೋಗಿಯವರ ಚಿಕ್ಕಪ್ಪ ಕಾದಂಬರಿಯಲ್ಲಿ ಸಣ್ಣ ಹಳ್ಳಿಯಂತಿದ್ದ

*Please cite this article as:* ಶಿವಕುಮಾರ್ ಜೆ ಮತ್ತು ಬಿ. ಪ್ರಭುಸ್ವಾಮಿ. (2025). ಚಿಕ್ಕಪ್ಪ ಎಂಬ ಸರ್ವಾಧಿಕಾರಿ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 6(4). ಪು.ಸಂ.* 32–41

ಉಪ್ಪಿನಂಗಡಿಗೆ ಒಬ್ಬ ಅಪರಿಚಿತ ವ್ಯಕ್ತಿ ಬಂದು, ಅವನು ತನ್ನ ಕ್ರೌರ್ಯ, ಜಾತೀಯತೆ, ಧರ್ಮದ ಮೂಲಕ ಊರಿನ ಜನತೆಯನ್ನು ತನ್ನ ಹಿಡಿತಕ್ಕೆ ತೆಗೆದುಕೊಳ್ಳುತ್ತಾನೆ ಮತ್ತು ತನ್ನ ಸರ್ವಾಧಿಕಾರಿ ಲಕ್ಷಣವನ್ನು ತೋರಿಸುತ್ತಾನೆ. ಜಾತಿ, ಧರ್ಮಗಳ ಬಗೆಗಿನ ಅವನ ಮನಸ್ಥಿತಿಯನ್ನು ಕಾದಂಬರಿ ವ್ಯಕ್ತಪಡಿಸುತ್ತಲೇ ವಿಶ್ಲೇಷಣೆಗೆ ಹಚ್ಚುತ್ತದೆ. ಪ್ರಸ್ತುತ ಸಮಾಜದಲ್ಲಿ ಜಾತಿ, ಧರ್ಮ, ರಾಜಕೀಯ ಕಾರಣಗಳಿಂದಲೂ ಒಂದು ಊರು ತನ್ನ ಮೂಲಗುಣಗಳನ್ನು ಕಳೆದುಕೊಳ್ಳುತ್ತದೆ. ಆಧುನಿಕತೆ ಸಾಗಿ ಮಾನವೀಯ ಗುಣಗಳನ್ನು ಕಳೆದುಕೊಳ್ಳುತ್ತಿದೆ. 'ಒಂದೂರನ್ನು ಕಲುಷಿತಗೊಳಿಸಲು ವಿಚಾರಗಳೂ ವಾದಗಳೂ ಸಾಕು. ಯಾವ ವಿಷಾನಿಲಗಳೂ ಬೇಕಿಲ್ಲ. ವಿಷಾನಿಲದ ಪ್ರಭಾವ ಹತ್ತೋ ಇಪ್ಪತ್ತೋ ವರುಷ ಇದ್ದೀತು. ಆದರೆ ಮಕ್ಕಳ ಮನಸ್ಸಲ್ಲಿ ತುಂಬುವ ವಿಚಾರಧಾರೆ ತಲೆಮಾರುಗಳ ತನಕ ಜೀವಂತವಾಗಿರುತ್ತದೆ.[2] ಎಂಬುದು ಸತ್ಯ. ಚಿಕ್ಕಪ್ಪ ಎಂಬ ಒಬ್ಬ ವ್ಯಕ್ತಿಯಿಂದ ಉಪ್ಪಿನಂಗಡಿ ಜನತೆಯಲ್ಲಿ ಆದ ಜಾತೀಯತೆ, ಧರ್ಮಾಂಧತೆಯ ಮನೋಭಾವ ಅದರಿಂದ ಉಪ್ಪಿನಂಗಡಿ ಜನತೆಗೆ ಆದ ನಷ್ಟಗಳು ಮತ್ತು ನೋವುಗಳು, ಅದಕ್ಕೆ ಜನರ ಪ್ರತಿಕ್ರಿಯೆಯನ್ನು ಕಾದಂಬರಿ ಚಿತ್ರಿಸುವುದರ ಜೊತೆಗೆ ಉಪ್ಪಿನಂಗಡಿಯಲ್ಲಿ ಚಿಕ್ಕಪ್ಪ ಮತ್ತು ಜನತೆಯ ನಡುವೆ ನಡೆಯುವ ಒಳ ಬೇಗುದಿ ಕಾದಂಬರಿಯ ಕಥಾ ವಸ್ತುವಾಗಿದೆ.

ಕಾದಂಬರಿಯ ಕೇಂದ್ರ ವ್ಯಕ್ತಿ ಚಿಕ್ಕಪ್ಪ. ಈತನ ಸುತ್ತ ಕಾದಂಬರಿ ಹೆಣೆದುಕೊಂಡಿದೆ. ಜೊತೆಗೆ ಉಪ್ಪಿನಂಗಡಿಯ ಗ್ರಾಮ್ಯ ಪರಿಸರವನ್ನು ಲೇಖಕರು ಅತ್ಯಂತ ಸೂಕ್ಷ್ಮವಾಗಿ ಕಟ್ಟಿಕೊಡುತ್ತಾರೆ. ಉಪ್ಪಿನಂಗಡಿಯ ಚಾರ್ಮಡಿಯಲ್ಲಿ ನಡೆಯುತ್ತಿದ್ದ ಮರದ ದಿಮ್ಮಿಗಳ ಕಳ್ಳಸಾಗಣೆಯಿಂದ ಕಥೆ ಪ್ರಾರಂಭವಾಗುತ್ತದೆ. ಅರಣ್ಯ ಇಲಾಖೆಯವರ ಕಣ್ಣು ತಪ್ಪಿಸಿ ಮರದ ದಿಮ್ಮಿಗಳನ್ನು ಸಾಗಿಸುವುದು ಲಾರಿ ಚಾಲಕರಿಗೆ ಕಷ್ಟದ ಕೆಲಸವೇ ಆಗಿತ್ತು. ಆಗಿದ್ದರೂ ಅವರು ತಮ್ಮ ಲಾರಿ ಓಡಿಸುವ ಕಲೆಯಿಂದ ಅವರು ಈ ಕೆಲಸವನ್ನು ಮಾಡುತ್ತಿದ್ದರು. ಚಾಲಕರು ಅರಣ್ಯ ಅಧಿಕಾರಿಗಳ ಕಣ್ಣು ತಪ್ಪಿಸುವ ಸಲುವಾಗಿ ಉಪ್ಪಿನಂಗಡಿ ಸಮೀಪ ಲಾರಿಗಳನ್ನು ಒಂದೆರಡು ಗಂಟೆ ನಿಲ್ಲಿಸಿ ಊಟ ತಿನ್ನುತ್ತಾ, ಕಾಫಿ ಕುಡಿಯುತ್ತಾ ಇರುವ ಸಮಯದಲ್ಲಿ ಉಪ್ಪಿನಂಗಡಿ ಮಕ್ಕಳು ಅವರ ಮನೆಗೆ ಸೌದೆಗಾಗಿ ಲಾರಿಗಳಲ್ಲಿ ಇರುವ ದಿಮ್ಮಿಗಳ ತೊಗಟೆಯನ್ನು ತೆಗೆದು ಮನೆಗೆ ಒಯ್ಯುತ್ತಿರುತ್ತಾರೆ.

ಉಪ್ಪಿನಂಗಡಿಯ ಸುತ್ತಮುತ್ತ ಇರುವ ಊರುಗಳಿಗೆ ಹೋಗಿಬರಲು ಇದ್ದದ್ದು ಒಂದೇ ಬಸ್ಸು ಅದನ್ನು ಕಾದು ಪ್ರಯಾಣ ಬೆಳೆಸುವ ಅಲ್ಲಿನ ಜನರು ಆಗಾಗ ಟಿಸಿಯ ಜೊತೆ ಜಗಳ ಆಡುತ್ತಿರುತ್ತಾರೆ. ಲೋಕ ಜ್ಞಾನ ಅರಿತುಕೊಳ್ಳಲು ಆ ಊರಿಗೆ ಬರುತ್ತಿದ್ದದ್ದು ಎರಡೇ ಇಂಗ್ಲಿಷ್ ಪತ್ರಿಕೆಗಳು. ಅಲ್ಲಿನ ಜನರಿಗೆ ಯಾರಿಗೂ ಇಂಗ್ಲಿಷ್ ಬರದ ಕಾರಣ ಯಾರೂ ಪತ್ರಿಕೆಗಳನ್ನು ಓದುತ್ತಿರಲಿಲ್ಲ. ಅಂತಹ ಸನ್ನಿವೇಶದಲ್ಲಿ ಉಪ್ಪಿನಂಗಡಿಗೆ ಒಬ್ಬ ಅಪರಿಚಿತನ ಆಗಮನವಾಗುತ್ತದೆ. ಅವನನ್ನು ಕಂಡ ಅಲ್ಲಿನ ಜನರಿಗೆ ಮೊದಲಿಗೆ ಆಶ್ಚರ್ಯ ಅಥವಾ ಗಾಬರಿಯಾಗಲೀ ಯಾವುದೂ ಅಗುವುದಿಲ್ಲ. ಬದಲಾಗಿ ಹೊಳೆಗಳ ಬಗೆಗೆ ವಿಚಾರಿಸಿದ ಆತನನ್ನು ಕಂಡು ಈತ 'ಬಹುಶಃ ಎರಡು ಹೊಳೆಗಳು ಸೇರುವ ಜಾಗಕ್ಕೆ ಪಿಂಡ ಪ್ರಧಾನ ಮಾಡುವುದಕ್ಕೆ ಬಂದವನಿರಬೇಕು'[3] ಎಂದುಕೊಳ್ಳುತ್ತಾರೆ. ಆದರೆ ಒಂದೆರಡು ದಿನಗಳು ಕಳೆದ ನಂತರ ಆತ ತಮ್ಮ ಊರಿನಲ್ಲಿಯೇ ಇದ್ದದ್ದರಿಂದ ಅವನ ಬಗೆಗೆ ಯೋಚಿಸಲು ಶುರುಮಾಡುತ್ತಾರೆ. ತಮ್ಮ ತಮ್ಮ ಕೆಲಸಗಳನ್ನು ಶ್ರದ್ಧೆಯಿಂದ ಮಾಡಿಕೊಳ್ಳುತ್ತಿದ್ದ

ಉಪ್ಪಿನಂಗಡಿ ಜನರಿಗೆ ಆ ಅಪರಿಚಿತ ವ್ಯಕ್ತಿ ತಮ್ಮ ಊರಿಗೆ ಬಂದು ಎರಡು ದಿನವಾದರು ಅವನು ಹೋಗದೆ ಅಲ್ಲೆ ಇದ್ದದ್ದರಿಂದ ಅಲ್ಲಿನ ಜನರಲ್ಲಿ ಕುತೂಹಲ ಮೂಡಿ, ಅವನ ಪೂರ್ವಪರ ವಿಚಾರಿಸಲು ಮುಂದಾಗುತ್ತಾರೆ. ಅದೇ ಊರಿನ ಪತ್ರಕರ್ತ ರಾಧಾಕೃಷ್ಣನಿಗೆ ಆ ಜವಾಬ್ದಾರಿ ಬರುತ್ತದೆ. ತಂದೆ ಕಾಮತರು ಒಂದು ಸಣ್ಣ ಹೊಗೆಸೊಪ್ಪಿನ ಅಂಗಡಿ ಇಟ್ಟುಕೊಂಡು ಜೀವನ ನಡೆಸುತ್ತಿರುತ್ತಾರೆ. ಈ ಕೆಲಸ ಅವನಿಗೆ ಇಷ್ಟವಾಗದೆ ಪತ್ರಕರ್ತನಾಗಿರುತ್ತಾನೆ. ಉಪ್ಪಿನಂಗಡಿಯಲ್ಲಿ ಹೆಚ್ಚು ಕೆಲಸ ಮಾಡದೆ ಸುತ್ತಾಡುವವನು ಮತ್ತು ಮಾತಿನ ಕಲೆ ಚನ್ನಾಗಿ ಇದ್ದದ್ದರಿಂದ ಅಲ್ಲಿನ ಜನತೆ ಸರ್ವಾನುಮತದಿಂದ ರಾಧಾಕೃಷ್ಣನನ್ನು ಆಯ್ಕೆ ಮಾಡುತ್ತಾರೆ. ಒಂದು ಸಾರಿ ಒಬ್ಬ ವ್ಯಕ್ತಿಯ ಜೊತೆ ಮಾತನಾಡಿದರೆ ಅವನ ಇತಿಹಾಸವನ್ನೆಲ್ಲ ತಿಳಿದುಕೊಳ್ಳುವೆ ಎಂಬ ಆತ್ಮವಿಶ್ವಾಸದಲ್ಲಿ ಅಪರಿಚಿತನ ಬಗೆಗೆ ವಿಚಾರಿಸಲು ಮುಂದಾಗುತ್ತಾನೆ. ರಾಧಾಕೃಷ್ಣನಿಗೆ ಯಾವ ಮಾಹಿತಿಯೂ ದೊರಕದೆ ಎಷ್ಟು ಹುಡುಕಿದರೂ ಆ ವ್ಯಕ್ತಿ ಅವನಿಗೆ ಸಿಗದೆ ನಿರಾಸೆಯಾಗುತ್ತದೆ. ಇದೇ ಸಮಯದಲ್ಲಿ ಊರಿನಲ್ಲಿದ್ದ ಕೆರೆಗೆ ಉರುಳಿ ಒಂದು ಬಸ್ಸು ಅಪಘಾತಕ್ಕೀಡಾಗಿರುತ್ತದೆ. 'ಅಷ್ಟು ದೊಡ್ಡ ಇನ್ಸಿಡೆಂಟಾಗಿದೆ.. ಸುದ್ದಿ ಕಳಿಸೋದಕ್ಕೇನಯ್ಯಾ ರೋಗ ನಿಂಗೆ.... ಏನು ಮಾಡ್ತಿಯ ಅಲ್ಲಿ ಕೂತ್ಕೊಂಡು...ಡಿಸ್ಮಿಸ್ ಮಾಡಿಬಿಡ್ತೀನಿ ಲೋಫರ್..'[4] ಎಂದು ಅಪರಿಚಿತನ ಬಗೆಗೆ ತಲೆಕೆಡಿಸಿಕೊಂಡಿದ್ದ ರಾಧಾಕೃಷ್ಣನಿಗೆ ಬಸ್ಸಿನ ಅಪಘಾತದ ಬಗೆಗೆ ವರದಿ ಮಾಡದೆ ಇದ್ದರಿಂದ ರಾಧಾಕೃಷ್ಣ ಕೆಲಸ ಮಾಡುವಲ್ಲಿನ ಮುಖ್ಯಸ್ಥನಾಗಿದ್ದ ರಮಾಕಾಂತನು ಹೇಳುತ್ತಾನೆ. ಇದಾದ ನಂತರ ಅವನು ವರದಿ ಮಾಡಲು ಆಸ್ಪತ್ರೆಗೆ ಹೋಗುತ್ತಾನೆ. ಅಪಘಾತಕ್ಕೀಡಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಪ್ರಖ್ಯಾತ ಹೋರಾಟಗಾರನಾಗಿದ್ದ ಸೀತಾರಾಮ ಯರ್ಮುಂಜನ ಸಂದರ್ಶನ ಮಾಡಲು ಅವನ ಹೆಡ್ ಹೇಳಿರುತ್ತಾನೆ. ಆದರೆ ರಾಧಾಕೃಷ್ಣ ಆ ಕೆಲಸ ಮಾಡಲು ಬಂದಾಗ ನೇರವಾಗಿ ರಮಾಕಾಂತ ಫೋನಿನಲ್ಲಿಯೇ ಸಂದರ್ಶನ ಮಾಡಿಯಾಗಿರುತ್ತದೆ. ನನ್ನಿಂದ ಸಂದರ್ಶನ ಆಗದೆ ಬದಲಾಗಿ ನನ್ನ ಮುಖ್ಯಸ್ಥನಿಂದಲೇ ಸೀತಾರಾಮನ ಸಂದರ್ಶನ ಆಗಿರುವುದು ಮತ್ತು ಸಂದರ್ಶನದ ವರದಿಯಲ್ಲಿ ರಾಧಾಕೃಷ್ಣನ ಹೆಸರನ್ನು ಹಾಕಿರುವುದು ರಾಧಾಕೃಷ್ಣನಿಗೆ ಸಂತೋಷದ ಜೊತೆಗೆ ಭೀತಿಯನ್ನೂ ಉಂಟುಮಾಡುತ್ತದೆ. ದಕ್ಷಿಣ ಕನ್ನಡದ ಸಾಂಸ್ಕೃತಿಕ ಪರಿಸರವನ್ನು ಆಡಳಿತ ಪಕ್ಷ ಹಾಳುಗೆಡವುತ್ತಿದೆ ಎಂದು ಮಾತನಾಡುವ ಸೀತಾರಾಮ ಯರ್ಮುಂಜ ಅಂಧಶ್ರದ್ಧೆ, ಕೋಮುವಾದ ಮತಾಂಧತೆಯಂತಹ ಮುಂತಾದ ವಿಚಾರಗಳ ಬಗೆಗೆ ಹೇಳುತ್ತಿರುತ್ತಾನೆ. ಅದು ಉಪ್ಪಿನಂಗಡಿಯಲ್ಲಿ ಗಲಭೆ ಎಬ್ಬಿಸುವಂತಹ ಮಾತುಗಳಾಗಿರುತ್ತವೆ. ಉಪ್ಪಿನಂಗಡಿಯ ಜೂನಿಯರ್ ಕಾಲೇಜಿನ ವಾರ್ಷಿಕೋತ್ಸವದ ಸಮಯದಲ್ಲಿ ಬಂದಂತಹ ಕೆಲವು ಕೋಮುವಾದೀ ಸಂಘಟನೆಗಳು ಅಲ್ಲಿ ಕೈಗೆ ಸಿಕ್ಕವರನ್ನೆಲ್ಲ ಕೊಂದು ಮನಬಂದಂತೆ ಹೊಡೆದು ಹಿಂಸಿಸಿರುತ್ತಾರೆ ಮತ್ತು ಆಂಗ್ಲಭಾಷಾ ಉಪನ್ಯಾಸಕನಾಗಿದ್ದ ಸುಧೀಂದ್ರನಿಗೂ ಹೊಡೆದು ರಸ್ತೆಗೆ ಎಸೆದು ಹೋಗಿರುತ್ತಾರೆ. ಹಿಂದೊಮ್ಮೆ ನಡೆದಿದ್ದ ಈ ಘಟನೆಯನ್ನು ನೆನೆದು ಈ ಊರಿನ ಜನ ನನ್ನನ್ನು ಸುಮ್ಮನೆ ಬಿಡುವುದಿಲ್ಲ ಎಂದು ರಾಧಾಕೃಷ್ಣ ಭಯಗೊಳ್ಳುತ್ತಾನೆ.

ಈ ಸೀತಾರಾಮ ಯರ್ಮುಂಜ ಉಪ್ಪಿನಂಗಡಿಯನ್ನು ಬಿಟ್ಟು ಇಪ್ಪತ್ತು ವರ್ಷಗಳಾಗಿರುತ್ತವೆ. ಅಪಘಾತ ಅಗಿದ್ದರಿಂದ ಆತ ಮತ್ತೆ ಉಪ್ಪಿನಂಗಡಿಗೆ ಬರಬೇಕಾಗುತ್ತದೆ. ಅವನಿಗೆ ಅಪ್ಪ ಅಮ್ಮ ಇರದ ಕಾರಣ ಅವನು

ಉಪ್ಪಿನಂಗಡಿ ಸಂಕಪ್ಪನ ಮನೆಯಲ್ಲಿ ಇದ್ದಾಗ ಅಲ್ಲಿ ತನಗಾದ ಅವಮಾನದಿಂದ ಅವನು ಊರು ಬಿಟ್ಟು ಹೋಗಿರುತ್ತಾನೆ. ಸಂಕಪ್ಪನ ಹೆಂಡತಿ ಬಹಳಷ್ಟು ಅವಮಾನ ಮಾಡಿರುತ್ತಾಳೆ. ಅದನ್ನು ಮತ್ತೊಮ್ಮೆ ಆಸ್ಪತ್ರೆಯಲ್ಲಿ ಇರುವಾಗ ನೆನೆದುಕೊಳ್ಳುತ್ತಾನೆ. ಸಂಕಪ್ಪಯ್ಯನನ್ನು ಭೇಟಿಯಾಗುವ ಆಸೆಯಿಂದ ರಾಧಾಕೃಷ್ಣ ಸಂಕಪ್ಪಯ್ಯನ ಮನೆಗೆ ಕರೆದುಕೊಂಡು ಬಂದರೂ ಉಪ್ಪಿನಂಗಡಿಯಲ್ಲಿ ಅವರು ಇರದ ಕಾರಣ ಮಡಿಕೇರಿಯಲ್ಲಿ ಏರ್ಪಡಿಸಿದ್ದ ರಂಗಶಿಬಿರಕ್ಕೆಂದು ಸೀತಾರಾಮನು ಮರಳಿ ಹೋಗಲು ಸಿದ್ಧನಾಗುತ್ತಾನೆ.

ಮತ್ತೊಂದು ಕಡೆ ಉಪ್ಪಿನಂಗಡಿಯ ಜನತೆಗೆ ಅಪರಿಚಿತ ವ್ಯಕ್ತಿಯ ಪರಿಚಯ ತಿಳಿಯುತ್ತದೆ. ಸೀತಾರಾಮ ಯರ್ಮುಂಜನಿಂದ ಅವನ ಹೆಸರು ಚಿಕ್ಕಪ್ಪನೆಂದು ಖಾತ್ರಿ ಮಾಡಿಕೊಳ್ಳುತ್ತಾರೆ. 'ಹಣೆಯ ನಡುವಿದ್ದ ಕುಂಕುಮ, ಹರಿದ ಎಡಗಿವಿ, ಕೊರಳಲ್ಲಿ ರುದ್ರಾಕ್ಷಿ ಮಾಲೆ, ಉಟ್ಟಿದ್ದ ಕಾವಿಬಟ್ಟೆ, ತೋಳುಗಳು ಹೊರಚಾಚಿದ್ದ ಬನೀನು. ಯಾವ ಭಾವನೆಯೂ ಇಲ್ಲದ ಮುಖಭಾವ.'[5] ಉಪ್ಪಿನಂಗಡಿಗೆ ಚಿಕ್ಕಪ್ಪನ ಪರಿಚಯವಾದದ್ದು ಹೀಗೆ. ಮೊದಲಿಗೆ ಸೀತಾರಾಮ ಯರ್ಮುಂಜನಿಂದ ಅವನ ಹೆಸರು ಚಿಕ್ಕಪ್ಪನೆಂದು ತಿಳಿಯುತ್ತದೆ. ಚಿಕ್ಕಪ್ಪನನ್ನು ನೋಡಿದ ತಕ್ಷಣ ಸೀತಾರಾಮ ಯರ್ಮುಂಜ ಹೆದರಿ ಓಡಿ ಹೋಗುತ್ತಾನೆ. ಏಕೆಂದರೆ ಚಿಕ್ಕಪ್ಪನನ್ನು ಮೈಸೂರಿನಲ್ಲಿದ್ದಾಗಲೇ ನೋಡಿರುತ್ತಾನೆ. ಅವನು ಎಂತಹ ಹೋರಾಟಗಾರ, ಹೇಗೆ ಒಂದು ಸಂಘಟನೆಯನ್ನು ಕಟ್ಟುತ್ತಾನೆ ಮತ್ತು ತನ್ನ ಅಸ್ತಿತ್ವವನ್ನು ಭದ್ರಗೊಳಿಸಿ ಎಲ್ಲವನ್ನು ತನ್ನ ಅಧೀನಕ್ಕೆ ಹೇಗೆ ಪಡೆಯುತ್ತಾನೆ ಎಂದು ಸೀತಾರಾಮ ಯರ್ಮುಂಜನಿಗೆ ತಿಳಿದಿರುತ್ತದೆ.

ಮೊದಲಿಗೆ ಉಪ್ಪಿನಂಗಡಿ ಬಸ್ ನಿಲ್ದಾಣದಲ್ಲಿ ಖಾಲಿ ಇದ್ದ ಹೋಟೆಲನ್ನು ಬಾಡಿಗೆಗೆ ತೆಗೆದುಕೊಂಡು ಚಿಕ್ಕಪ್ಪ ಸಸ್ಯಹಾರಿ ಹೋಟೆಲನ್ನು ಶುರುಮಾಡುತ್ತಾನೆ. 'ದೇವಸ್ಥಾನಕ್ಕೆ ಬಂದವರ ಹತ್ತಿರ ನಾನು ಹಣ ತೆಗೆದುಕೊಳ್ಳುವುದಿಲ್ಲ. ಇದೊಂಥರ ದೇವರ ಸೇವೆ. ದುಡ್ಡು ಎಲ್ಲಿ ಮಾಡ್ಕೋಬೇಕೋ ಮಾಡ್ಕೋತೇನೆ.'[6] ಎಂದು ಅಲ್ಲಿನ ಜನರಿಗೆ ಉಚಿತವಾಗಿ ಮಜ್ಜಿಗೆ, ಷರಬತ್ತು, ಎಳನೀರುಗಳನ್ನು ನೀಡುತ್ತಾ ಮೊದಲು ಅಲ್ಲಿನ ಜನತೆಯ ವಿಶ್ವಾಸವನ್ನು ಗಳಿಸಲು ಎಲ್ಲಾ ರೀತಿಯ ತಂತ್ರಗಳನ್ನು ಮಾಡುತ್ತಾನೆ. ಇದರಿಂದ ಶುರುವಿನಲ್ಲಿ ಉಪ್ಪಿನಂಗಡಿಯ ಕೆಲ ವ್ಯಾಪಾರಸ್ತರಿಗೆ ಚಿಕ್ಕಪ್ಪನಿಂದ ಅವರ ವ್ಯಾಪಾರ ವ್ಯವಹಾರಗಳಿಗೆ ಅಡ್ಡಿಯಾಗುತ್ತಿದೆ ಎಂದು ಅವನ ಬಳಿ ಮಾತನಾಡಿ ಜಗಳವಾಡಿರುತ್ತಾರೆ. ಇನ್ನು ಹಲವರು ಅವನಿಂದ ಆಗುತ್ತಿದ್ದ ಈ ಎಲ್ಲಾ ಉಚಿತ ಸೇವೆಗಳು ಮತ್ತು ಅವನ ಮಾತಿನ ಬಲೆಗೆ ಬಿದ್ದು ಅವನಲ್ಲಿ ನಂಬಿಕೆ, ವಿಶ್ವಾಸವನ್ನಿಡುತ್ತಾರೆ. ಇದರಿಂದ ಬಹುಬೇಗ ಅಲ್ಲಿನ ಜನರ ಜೊತೆ ಪ್ರೀತಿ, ವಿಶ್ವಾಸದಿಂದ ನಡೆದುಕೊಂಡು ಅಲ್ಲಿನ ಜನರನ್ನು ತನ್ನತ್ತ ಸೆಳೆದುಕೊಳ್ಳುತ್ತಾನೆ.

'ಆರ್ಥಿಕವಾಗಿ ಶಕ್ತನಾದವನೊಬ್ಬ ಮಿಕ್ಕೆಲ್ಲ ಸಂಗತಿಗಳನ್ನು ಗೌಣವಾಗಿಸಿ ಉಚ್ಚವರ್ಗದವನಾಗಲು ಇಲ್ಲಿ ಸಾಧ್ಯವಾಗುತ್ತೆ.'[7] ಎಂಬ ವಾಕ್ಯದಂತೆ ಅಪರಿಚಿತನಾಗಿ ಉಪ್ಪಿನಂಗಡಿಗೆ ಬಂದ ಈ ಚಿಕ್ಕಪ್ಪ ಮೊದಲು ತನ್ನ ನಂಬಿಕೆ ಗಳಿಸಲು ಅಲ್ಲಿನ ಜನರಿಗೆ ಉಚಿತ ಸೇವೆಗಳನ್ನು ಕೊಟ್ಟು, ಕ್ರಮೇಣ ಅಲ್ಲಿನ ವ್ಯಾಪಾರ ವಹಿವಾಟುಗಳಿಗೆ ಕೈಹಾಕಿ ಆರ್ಥಿಕವಾಗಿ ಭದ್ರಬುನಾದಿಯನ್ನು ನಿರ್ಮಿಸಿಕೊಳ್ಳುತ್ತಾನೆ. ನಂಬಿಕೆಯೇ ವ್ಯಾಪಾರದ ಬುನಾದಿ ಎಂಬುದು ಚಿಕ್ಕಪ್ಪನಿಗೆ ತಿಳಿದಿರುತ್ತದೆ. ಅಪರಿಚಿತನೆಂದು ಹುಡುಕುತ್ತಿದ್ದ ಅಲ್ಲಿನ ಜನರು ಅವನನ್ನು ತಮ್ಮೂರಿನಲ್ಲೊಬ್ಬ ಎಂಬಂತೆ ಅವನನ್ನು ಸ್ವೀಕರಿಸುತ್ತಾ ಬರುತ್ತಾರೆ. ಸಾಲ ಬೇಕೆಂದವರಿಗೆ ಸಾಲ

ಕೊಡುತ್ತಾ, ಚಿಕ್ಕ ಮಕ್ಕಳಿಗೆ ತಿಂಡಿ ತಿನಿಸು ಹಂಚುತ್ತಾ ಉಪ್ಪಿನಂಗಡಿಯಲ್ಲಿ ತನ್ನ ಅಸ್ತಿತ್ವವನ್ನು ಗಟ್ಟಿಗೊಳಿಸುತ್ತಾನೆ. ಚಿಕ್ಕಪ್ಪನ ಅಸ್ತಿತ್ವ ಎಷ್ಟು ಗಟ್ಟಿಯಾಯಿತೆಂದರೆ ದೇವಸ್ಥಾನದ ಉತ್ಸವದಲ್ಲಿ ಉತ್ಸವ ಮೂರ್ತಿಯನ್ನು ಚಿಕ್ಕಪ್ಪನೆ ಹೊರುವಂತಾಗುತ್ತದೆ. ಚಿಕ್ಕಪ್ಪನ ರೀತಿ ಉತ್ಸವ ಮೂರ್ತಿಯನ್ನು ಯಾರು ಅದುವರೆಗೂ ಮೆರೆಸಿದವರೆ ಇರುವುದಿಲ್ಲ. ಆ ರೀತಿ ಮೆರೆಸಿ ಜನರಲ್ಲಿ ಚಿಕ್ಕಪ್ಪ ಸಾಮಾನ್ಯ ವ್ಯಕ್ತಿ ಅಲ್ಲ ಎನ್ನಿಸಿಕೊಳ್ಳುತ್ತಾನೆ. ಚಿಕ್ಕಪ್ಪನ ಧೈರ್ಯ, ಸಾಹಸಗಳು ದಿನೇ ದಿನೇ ಹೆಚ್ಚುತ್ತಾ ಇಡೀ ಉಪ್ಪಿನಂಗಡಿ ಅವನ ಹಿಡಿತಕ್ಕೆ ಬಂದು ಬಿಡುತ್ತದೆ. ಅದರಂತೆ ಚಿಕ್ಕಪ್ಪ ಕಾಲ ಕಳೆದಂತೆ ಉಪ್ಪಿನಂಗಡಿಯನ್ನು ತನ್ನ ತೆಕ್ಕೆಗೆ ತೆಗೆದುಕೊಂಡು ಸರ್ವಾಧಿಕಾರಿ ಲಕ್ಷಣವನ್ನು ತೋರಿಸಲು ಮುಂದುವರೆಯುತ್ತಾನೆ. ತನ್ನದೇ ಆದ ಒಂದು ಗುಂಪನ್ನು ಕಟ್ಟಿಕೊಳ್ಳುತ್ತಾನೆ.

ಉಪ್ಪಿನಂಡಿಯ ಜೂನಿಯರ್ ಕಾಲೇಜಿನಲ್ಲಿ ಪಾಠ ಮಾಡುತ್ತಿದ್ದ ಸುಧೀಂದ್ರ ವಿಚಾರವಾದದ ಮನುಷ್ಯನಾಗಿರುತ್ತಾನೆ. ಸಮಾನತೆಯನ್ನು ಕಾಪಾಡಿಕೊಂಡು ಮನುಷ್ಯ ಜೀವನ ನಡೆಸಬೇಕು ಎಂಬ ಆಲೋಚನೆಯನ್ನು ಇಟ್ಟುಕೊಂಡಿರುತ್ತಾನೆ. ಎಲ್ಲ ವಿದ್ಯಾರ್ಥಿಗಳು ಜಾತಿ ಹಾಗು ಧರ್ಮದ ಸೂಚಕಗಳನ್ನು ಹಾಕಿಕೊಂಡು ಶಾಲೆಗೆ ಬರಬಾರದೆಂದು ತಾಕೀತು ಮಾಡಿರುತ್ತಾನೆ. ಅದರಿಂದ ಅವನಿಗೆ ಅಪಾರವಾದ ಅಪಾಯಗಳು ಎದುರಾಗುತ್ತವೆ. ಕುಂಕುಮ ಇಟ್ಟುಕೊಂಡು ಬರುತ್ತಿದ್ದ ಮಕ್ಕಳನ್ನು ಕುಂಕುಮ ಇಟ್ಟುಕೊಂಡು ಬರದಂತೆ ಸುಧೀಂದ್ರ ತಡೆದಿರುತ್ತಾನೆ. ಆದರೆ ಚಿಕ್ಕಪ್ಪ ಅದಕ್ಕೆ ಅಡ್ಡಗಾಲು ಹಾಕಿ ಸುಧೀಂದ್ರನಿಗೆ ಹೆದರಿಸಿ ಮತ್ತೆ ಮಕ್ಕಳಿಗೆ ಕುಂಕುಮ ಇಟ್ಟುಕೊಂಡು ಬರುವಂತೆ ಮಾಡುತ್ತಾನೆ. ಸುಧೀಂದ್ರ ಯಾವ ಪ್ರಯತ್ನ ಮಾಡಿದರೂ ಚಿಕ್ಕಪ್ಪನನ್ನು ಹೆದುರಿಸಲು ಆಗುವುದಿಲ್ಲ. ಬದಲಾಗಿ ಇದರಿಂದ ಸುಧೀಂದ್ರ ಎಲ್ಲಿ ಹೋದರೂ ಚಿಕ್ಕಪ್ಪನ ಹುಡುಗರು ತೊಂದರೆ ಕೊಡಲು ಶುರು ಮಾಡಿರುತ್ತಾರೆ. ಕಾಲೇಜಿನಲ್ಲಿ ನಡೆದ ಈ ಘಟನೆ ಚಿಕ್ಕಪ್ಪನ ಸರ್ವಾಧಿಕಾರಿ ಲಕ್ಷಣಕ್ಕೆ ಮುನ್ನುಡಿಯಾಗುತ್ತದೆ. ಇದರಿಂದ ಅನೇಕ ಕೋಮುವಾದಿ ಸಂಘಟನೆಗಳು ಚಿಕ್ಕಪ್ಪನನ್ನು ಬೆಂಬಲಿಸಲು ನಿಲ್ಲುತ್ತವೆ.

ಹೀಗೆ ಸಣ್ಣ ಪುಟ್ಟ ಸಮಸ್ಯೆಗಳನ್ನು ಬಗೆಹರಿಸುತ್ತಾ ಇರುವ ಸಮಯದಲ್ಲಿ ಹಸುಗಳನ್ನು ಮಾಂಸಕ್ಕೆ ಮಾರಾಟ ಮಾಡುವುದಕ್ಕೆ ತಡೆ ಒಡ್ಡುತ್ತಾನೆ ಮತ್ತು ಅವುಗಳನ್ನು ಯಾರು ಮಾರಕೂಡದು ಅವುಗಳನ್ನು ನಿಮ್ಮ ಬಳಿಯೇ ಇಟ್ಟು ಕೊಳ್ಳಬೇಕು. ತಪ್ಪದೆ ಗೋನಿಷೇಧ ಕಾಯ್ದೆಯನ್ನು ಪಾಲನೆ ಮಾಡಬೇಕು. ಭಾರತೀಯ ಸಂಸ್ಕೃತಿಯಲ್ಲಿ ಗೋವುಗಳಿಗೆ ಪೂಜ್ಯನೀಯ ಸ್ಥಾನಮಾನ ಇದೆ. ಅವುಗಳು ದೇವರ ಸಮಾನ. ಅವುಗಳಿಂದ ಚೆನ್ನಾಗಿ ದುಡಿಸಿಕೊಂಡು ಅವುಗಳಿಗೆ ವಯಸ್ಸಾದ ನಂತರ ಮಾಂಸಕ್ಕೆ ಮಾರುವುದು ಅಪರಾಧ ಎಂದು ತನ್ನ ಸಿದ್ಧಾಂತವನ್ನು ಮಂಡಿಸುತ್ತ ಯಾರೂ ಗೋವುಗಳನ್ನು ಮಾರುವ ಯೋಚನೆ ಮಾಡಬಾರದು ಎಂಬ ಚಿಕ್ಕಪನ ತೀರ್ಮಾನ ಉಪ್ಪಿನಂಗಡಿಯ ಜನತೆಗೆ ನುಂಗಲಾರದ ತುತ್ತಾಗುತ್ತದೆ. 'ನಮ್ಮ ಗೋವುಗಳ ಮೇಲೆ ಕತ್ತಿ ಇಡುವವರ ಗೋಣು ಕತ್ತರಿಸಿ'[8] ಎಂದು ಚಿಕ್ಕಪ್ಪ ಉಪ್ಪಿನಂಗಡಿಯಲ್ಲಿ ಗೋಮಾಂಸ ನಿಷೇಧವನ್ನು ಕಟ್ಟುನಿಟ್ಟಾಗಿ ಜಾರಿತರಲು ಆವೇಶಭರಿತನಾಗಿ ಭಾಷಣ ಮಾಡಿರುತ್ತಾನೆ. ಸಂಪೂರ್ಣವಾಗಿ ಉಪ್ಪಿನಂಗಡಿ ಜನತೆ ಗೋವುಗಳನ್ನು ಮಾರದಂತೆ ನಿಷೇಧ ಹೇರುತ್ತಾನೆ. ಅವನ ಮಾತು ತಪ್ಪಿ ಯಾರಾದರು ಕಣ್ಣುತಪ್ಪಿಸಿ ಹಸುಗಳನ್ನು ಮಾರಿದರೆ ಅವನ ಹುಡುಗರು ಸಾಯುವ ರೀತಿ ಹೊಡೆಯುತ್ತಿರುತ್ತಾರೆ.

ಉಪ್ಪಿನಂಗಡಿಯು ಸಂಪೂರ್ಣವಾಗಿ ಚಿಕ್ಕಪ್ಪನ ಕೈವಶ ಆಗಿಹೋಗುತ್ತದೆ. ಯಾವಾಗ ಉಪ್ಪಿನಂಗಡಿ ಅವನು ಹೇಳಿದಂತೆ ಕೇಳಲು ಶುರು ಮಾಡಿತೋ ಆಗಲೇ ಚಿಕ್ಕಪ್ಪ ಮತ್ತೊಂದು ಹೆಜ್ಜೆಯಂತೆ ಬೇರೆ ಬೇರೆ ಊರುಗಳಲ್ಲಿ ಇವನು ತನ್ನ ನಿಯಮಗಳನ್ನು ಹೇರಲು ಮುಂದಾಗುತ್ತಾನೆ. ಅವನ ಭಯದಿಂದ ಎಲ್ಲರೂ ಅವನು ಹೇಳಿದಂತೆಯೇ ಕೇಳಲು ಶುರು ಮಾಡುತ್ತಾರೆ. ಯಾರೂ ಗೋವುಗಳನ್ನು ಮಾರುವ ಯೋಚನೆ ಮಾಡವುದಿಲ್ಲ.

ಆ ಸಮಯದಲ್ಲೆ ಗೋಮಾಂಸ ಭಕ್ಷಣೆ ತಪ್ಪಲ್ಲ. ಅದು ಒಂದು ಆಹಾರ ಎಂದು ಪ್ರತಿಪಾದಿಸುವ ಮತ್ತೊಂದು ಗುಂಪು ಹುಟ್ಟಿಕೊಳ್ಳುತ್ತದೆ. ಆ ಗುಂಪಿನ ನಾಯಕ ಸೀತಾರಾಮ ಯರ್ಮುಂಜ. ಇಡೀ ಕರ್ನಾಟಕವನ್ನು ಸುತ್ತಿ ಬಂದಿದ್ದ ಚಿಕ್ಕಪ್ಪನ ಬಗೆಗೆ ತಿಳಿದದ್ದರಿಂದ ಜಾಗೃತವಾಗಿ ತನ್ನ ಹೋರಾಟವನ್ನು ಮುಂದುವರೆಸುತ್ತಾ ಬರುತ್ತಾನೆ. ಮುದಿ ಹಸುಗಳಿಂದ ಸಮಾಜಕ್ಕೆ ಯಾವ ಉಪಯೋಗವಿಲ್ಲ. ಅವುಗಳಿಂದ ರೈತರಿಗೆ ಅಪಾರವಾದ ನಷ್ಟವಾಗುತ್ತದೆ ಎಂದು ತನ್ನ ಹೋರಾಟದ ಮುಖ್ಯ ಅಂಶವನ್ನು ಇಟ್ಟುಕೊಂಡು ಚಿಕ್ಕಪ್ಪನ ವಿರುದ್ಧ ಚಳುವಳಿ ಪ್ರಾರಂಭಿಸುತ್ತಾನೆ. ಗೋಮಾಂಸ ಭಕ್ಷಣೆ ಮಾಡುವುದು ಮೇಲ್ವರ್ಗದವರಿಗೆ ಇಷ್ಟವಾಗುವುದಿಲ್ಲ ಎಂಬ ವಾದವನ್ನು ಮುಂದಿಟ್ಟುಕೊಂಡು ಹೋರಾಟ ಮಾಡುವ ಸಮಯದಲ್ಲಿ ಸೀತಾರಾಮನಿಗೆ ಚಿಕ್ಕಪ್ಪನ ಹುಡುಗರು ಅವನು ಸಾಯುವ ಹಾಗೆ ಹೊಡೆದು ಮತ್ತೆ ಭಾಷಣ ಮಾಡದಂತೆ ಮಾಡುತ್ತಾರೆ. ಸೀತಾರಾಮ ಯರ್ಮುಂಜನಿಗೆ ಚಿಕ್ಕಪ್ಪನ ಹುಡುಗರು ಮಾಡಿದ ರೀತಿ ಕಂಡು ಮತ್ತೆ ಯಾರೂ ಗೋವುಗಳನ್ನು ಚಿಕ್ಕಪ್ಪನ ಕಣ್ಣು ತಪ್ಪಿಸಿ ಮಾರುವ ಸಾಹಸ ಬಿಟ್ಟು ಬಿಡುತ್ತಾರೆ.

ತದನಂತರ ಚಿಕ್ಕಪ್ಪ ರೈತರು ಬೆಳೆದ ಧಾನ್ಯಗಳನ್ನು ನನಗೇ ಮಾರಬೇಕು ಎಂದು ತಾಕೀತು ಮಾಡುತ್ತಾನೆ. ಜೊತೆಗೆ ಅವನು ಹೇಳಿದ ಬೆಲೆಗೆ ಮಾರಬೇಕಾಗಿ ಬರುತ್ತದೆ. ಮತ್ತು ಯುವಕರಲ್ಲಿ ದೈವ ಭಕ್ತಿ ಬೆಳೆಯುವಂತೆ ಮಾಡಲು ಭಜನಾ ಮಂಡಳಿಗಳು ಮತ್ತು ಹಲವು ದೇವಸ್ಥಾನಗಳಿಗೆ ಜೀರ್ಣೋದ್ಧಾರ ಮಾಡಿಸುತ್ತಾನೆ. ದಿನ ನಿತ್ಯ ಯುವಕರೆಲ್ಲ ಬಂದು ದೇವರಿಗೆ ಪೂಜೆ ಮಾಡುವುದು, ಭಜನೆ ಮಾಡುವುದು ಮುಂತಾದವುಗಳಲ್ಲಿ ಪಾಲ್ಗೊಳ್ಳುವಂತೆ ಮಾಡುತ್ತಾನೆ. ಹೊಸದಾಗಿ ಕಾಲೇಜುಗಳನ್ನು ನಿರ್ಮಿಸುತ್ತಾನೆ. ಇವೆಲ್ಲದರ ಪರಿಣಾಮವಾಗಿ ಯುವಕ ಯುವತಿಯರಲ್ಲಿ ಹಲವು ಪ್ರೇಮ ಪ್ರಕರಣಗಳು ಪ್ರಾರಂಭ ಪಡೆದುಕೊಳ್ಳುತ್ತವೆ. ಚಿಕ್ಕಪ್ಪ ಅಂತವರನ್ನು ಹುಡುಕಿ ಹೆದರಿಸಲು ಶುರು ಮಾಡುತ್ತಾನೆ. 'ವಾಸ್ತವವಾಗಿ ಏಕಧರ್ಮ, ಏಕ ಸಂಸ್ಕೃತಿಗಳನ್ನು ಪ್ರತಿಪಾದಿಸುವ ಧಾರ್ಮಿಕ ಮೂಲಭೂತವಾದವು ಸಹಜ ಧಾರ್ಮಿಕತೆಯ ಬದಲು ಸಾಂಸ್ಥಿಕ ಧರ್ಮವನ್ನು ಬಲಗೊಳಿಸುತ್ತದೆ. ಯಾಕೆಂದರೆ ಸಾಂಸ್ಥಿಕ ಧರ್ಮವು ರಾಜಕೀಯ ಶಕ್ತಿಯಾಗಬಲ್ಲದು; ಲಾಭದಾಯಕವಾಗಬಲ್ಲದು'[9] ಎಂಬಂತೆ ಹಿಂದೂ ಧರ್ಮ ಒಂದೇ ಅಸ್ತಿತ್ವದಲ್ಲಿರಬೇಕು ಎಂಬ ನಿಲುವುಳ್ಳವನಾಗಿದ್ದ ಚಿಕ್ಕಪ್ಪನು ಪ್ರೀತಿ ಮಾಡಿದ ಹುಡುಗ ಹುಡುಗಿ ಮದುವೆ ಮಾಡಿಕೊಳ್ಳಲು ಭಯ ಪಡುವಂತೆ ಮಾಡುತ್ತಾನೆ. ಹಾಗೆ ಮುಂದುವರೆಯುತ್ತಾ ಮದುವೆ ಆಗುವುದಾದರೆ ಒಂದೇ ಧರ್ಮದವರು ವಿವಾಹ ಆಗಬೇಕು ಎಂಬ ನಿಯಮವನ್ನು ಹೇರುತ್ತಾನೆ. ಅದನ್ನು ಮೀರಿ ನಡೆದುಕೊಂಡರೆ ಚಿಕ್ಕಪ್ಪ ಕೊಡುತ್ತಿದ್ದ ಶಿಕ್ಷೆಗೆ ಗುರಿಯಾಗಬೇಕಿತ್ತು. ವಿಶೇಷವಾಗಿ ಹಿಂದೂ ಹೆಣ್ಣು ಮಕ್ಕಳು ಬೇರೆ ಧರ್ಮದ ಗಂಡಿನೊದಿಗೆ ಮದುವೆ ಆಗುವಂತಿರಲಿಲ್ಲ. ಹುಡುಗ ಮತಾಂತರಕ್ಕೆ ಒಪ್ಪಿದರೆ ಮಾತ್ರ ಒಪ್ಪುತ್ತಿದ್ದ. ಮತಾಂತರ

ಮದುವೆಗೆ ರಾಮದಾಸ ಮತ್ತು ಮೇರಿಯಮ್ಮ ಉದಾಹರಣೆಯಾಗುತ್ತಾರೆ. ಅದರಂತೆ ಯಾರು ಪ್ರೇಮ ವಿವಾಹ ಮಾಡಿಕೊಳ್ಳಲು ಇಷ್ಟ ಪಟ್ಟರೆ ಅವರೆಲ್ಲ ತಮ್ಮ ತಮ್ಮ ಧರ್ಮಗಳನ್ನು ತ್ಯಜಿಸಿ ಹಿಂದೂ ಧರ್ಮಕ್ಕೆ ಮತಾಂತರ ಆಗಬೇಕು ಎಂಬ ನಿಯಮದ ಮುದ್ರೆ ಬೀಳುತ್ತದೆ. ಇವುಗಳನ್ನೆಲ್ಲ ಮಾಡಿದ ಚಿಕ್ಕಪ್ಪ ಕಾನೂನು ರೂಪಿಸುವ ಸರ್ವಾಧಿಕಾರಿಯಾಗಿ ಮೂಡುತ್ತಾ ರಾಜಕೀಯವಾಗಿಯೂ ಬೆಳೆಯಲು ಏರ್ಪಾಡುಗಳನ್ನು ಮಾಡಿಕೊಳ್ಳುತ್ತಾ ಬರುತ್ತಾನೆ.

ಇಂತಹ ಚಿಕ್ಕಪ್ಪನನ್ನು ಬದಲಾಯಿಸಿದ್ದು ಡಾ. ರಜಾಕ್, ಮಾಳವಿಕ ಮತ್ತು ರಶೀದ್ ಪ್ರೀತಿಸಿ ಮದುವೆಯಾಗಿರುತ್ತಾರೆ. ಒಮ್ಮೆ ರಶೀದ್ ಚಿಕ್ಕಪ್ಪನ ಕೈಗೆ ಸಿಕ್ಕಿ ನಿರ್ದಾಕ್ಷಿಣ್ಯವಾಗಿ ಹೊಡೆತಗಳನ್ನು ತಿಂದು ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಆ ಸಂದರ್ಭದಲ್ಲಿ ರಶಿದ್ನ ಹುಡುಗರು ಚಿಕ್ಕಪ್ಪ ಒಂಟಿಯಾಗಿದ್ದಾಗ ಅವನು ಸಾಯುವ ಹಾಗೆ ಹೊಡೆದುಬಿಡುತ್ತಾರೆ. ಪ್ರಾರಂಭದಲ್ಲಿ ಡಾ. ರಜಾಕ್‌ನನ್ನು ದ್ವೇಷಿಸುತ್ತಿದ್ದ ಚಿಕ್ಕಪ್ಪ ಅವನು ಮಾಡಿದ ಸಹಾಯವನ್ನು ನೆನೆದು ಬದಲಾಗುತ್ತಾ ಬರುತ್ತಾನೆ. ಚಿಕ್ಕಪ್ಪ ಹಾಸಿಗೆ ಹಿಡಿದು ತಿಂಗಳಾದರು ಅವನನ್ನು ಬಿಟ್ಟು ಹೋಗದೆ ಅವನಿಗೆ ಚಿಕಿತ್ಸೆ ನೀಡಿ ಬದುಕಿಸಿರುತ್ತಾನೆ ರಜಾಕ್. 'ಸೌಹಾರ್ದಯುತವಾಗಿ, ಅರ್ಥಪೂರ್ಣವಾಗಿ ಬಾಳುವ ಬಗೆಯನ್ನು ರೂಪಿಸಿಕೊಳ್ಳಬೇಕು. ಮಾನವೀಯತೆ, ಅಂತಃಕರಣ ನಮ್ಮೆಲ್ಲರ ತಿಳುವಳಿಕೆ, ಬುದ್ಧಿಶಕ್ತಿ ಅದಕ್ಕೆ ವಿನಿಯೋಗವಾಗಬೇಕು.'[10] ಎಂಬಂತೆ ಚಿಕ್ಕಪ್ಪ ರಜಾಕ್‌ನನ್ನು ಬೇರೆಯ ಧರ್ಮದವನೆಂದು ದ್ವೇಷಿಸಿದ್ದರು ಸಹ ಚಿಕ್ಕಪ್ಪನು ಅನಾರೋಗ್ಯದಿಂದ ಬಳಲುತ್ತಿದ್ದಾಗ ರಜಾಕ್ ಮಾಡಿದ ಸೇವೆ ಮತ್ತು ಸಹಾಯದಿಂದ, ಚಿಕ್ಕಪ್ಪನ ರಾಕ್ಷಸ ಪ್ರವೃತ್ತಿಯ ಅಂತಃಕರಣ ಕರಗಿ ಕೊನೆಗೆ ಮಾನವೀಯತೆಯು ಚಿಗುರೊಡೆಯುತ್ತದೆ. ರಶೀದನ ಮಗ ಮತ್ತು ಮಾಳವಿಕಾಳನ್ನು ತನ್ನ ಹತ್ತಿರವೇ ಇಟ್ಟುಕೊಂಡು ನೋಡಿಕೊಳ್ಳುತ ತನ್ನ ಕಾಲವನ್ನು ಸವೆಸುತ್ತಾ ಬರುತ್ತಾನೆ ಚಿಕ್ಕಪ್ಪ.

ಭಾರತವು ವಿವಿಧತೆಯಲ್ಲಿ ಏಕತೆಯನ್ನು ಹೊಂದಿದ ನಾಡು. ದೇಶದಲ್ಲಿ ವಿವಿಧ ಜಾತಿ, ಧರ್ಮದ ಜನರು ಸೌಹಾರ್ದತೆಯಿಂದ ಸಾಮರಸ್ಯದಿಂದ ಬಾಳುತ್ತಿದ್ದಾರೆ. ಈ ಸಾಮರಸ್ಯಕ್ಕೆ ಭಾಗವಾಗಿರುತ್ತದೆ. ಭಾರತವು ಬಹು–ಧರ್ಮೀಯ ಮತ್ತು ಬಹುಭಾಷಾ ಭೂಮಿಯಾಗಿದೆ. ವಿವಿಧ ಧರ್ಮದ ಜನರು ಇಲ್ಲಿ ಸೌಹಾರ್ದತೆಯಿಂದ ಬದುಕುತ್ತಿದ್ದಾರೆ. ಹೋಳಿ, ದೀಪಾವಳಿ, ಈದ್–ಮಿಲಾದ್ ಕ್ರಿಸ್‌ಮಸ್ ಸಂಭ್ರಮವನ್ನು ಮತ–ಧರ್ಮ ಭೇದವಿಲ್ಲದೆ ಸಮಾನ ಉತ್ಸಾಹದಿಂದ ಆಚರಿಸಲಾಗುತ್ತದೆ. ಆದರೂ ಕೆಲವು ದುಷ್ಟ ಕೂಟಗಳ ಕುತಂತ್ರದಿಂದಾಗಿ ಕೆಲವೊಮ್ಮೆ ಕೋಮು ಸೌಹಾರ್ದತೆಗೆ ಭಂಗ ಉಂಟಾಗುತ್ತದೆ. ಕೋಮು ಗಲಭೆಯು ಸಾಮೂಹಿಕ ಹಿಂಸಾಚಾರದ ಒಂದು ರೂಪವಾಗಿದ್ದು ಅದು ವಿವಿಧ ಧಾರ್ಮಿಕ, ಜನಾಂಗೀಯ, ಭಾಷಾವಾರು ಅಥವಾ ಪ್ರಾದೇಶಿಕ ಚೌಕಟ್ಟಿನೊಳಗೆ ಘರ್ಷಣೆಯನ್ನು ಉಂಟುಮಾಡುತ್ತದೆ. ಆದ್ದರಿಂದ ಭಾರತದ ಸಂವಿಧಾನವು ಕೋಮು ಸೌಹಾರ್ದತೆಯನ್ನು ಕಾಪಾಡಿಕೊಳ್ಳಲು ಕಾನೂನುಗಳನ್ನು ಜಾರಿಗೊಳಿಸಿದೆ ಮತ್ತು ಸರ್ಕಾರಗಳು ಅದನ್ನು ಖಚಿತಪಡಿಸಿಕೊಳ್ಳಲು ಬಲವಾದ ಕ್ರಮಗಳನ್ನು ತೆಗೆದುಕೊಂಡಿವೆ. ಆದರೂ ಈ ಹಿಂದೆ ಮತ್ತು ಈಗಲೂ ಧರ್ಮದ ಹೆಸರಿನಲ್ಲಿ ಶಾಂತಿ ಕದಡುವ ಹಲವಾರು ನಿದರ್ಶನಗಳಿವೆ ಎಂಬುದು ವಾಸ್ತವ ಮತ್ತು ಕಟುಸತ್ಯ.

'ಇರಾಕ್ ಮತ್ತು ಈಜಿಪ್ಟ್‌ನಂತೆಯೇ ಧಾರ್ಮಿಕ ಅಲ್ಪಸಂಖ್ಯಾತರನ್ನು ಹಿಂಸಿಸುವಲ್ಲಿ ಅಂತಾರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯದ ಮೇಲಿನ ಯುಎಸ್ ಆಯೋಗವು ಭಾರತಕ್ಕೆ 2ನೇ ಶ್ರೇಣಿಯನ್ನು ನೀಡಿದೆ'[11] ಇದನ್ನು ಒಪ್ಪುತ್ತೇವೋ ಬಿಡುತ್ತೇವೋ ಅದು ಬೇರೆ ಪ್ರಶ್ನೆ. ಇದಕ್ಕೆ ಪೂರಕವಾಗಿ ಜನರಲ್ಲಿನ ಅಜ್ಞಾನದಿಂದಲೋ, ಸರ್ಕಾರದ ವೈಫಲ್ಯದಿಂದಲೋ ಇಂತಹ ಕೋಮುಗಲಭೆಗಳು ಭಾರತ ಪಾಕಿಸ್ತಾನದ ವಿಭಜನೆಯ ಸಮಯದಿಂದಲೂ ಈಗಿನವರೆಗೆ ಹೆಚ್ಚಾಗುತ್ತಲೇ ಬಂದಿದೆ. 'ವಿಭಜನೆಯ ನಂತರ 1961ರಲ್ಲಿ ನಡೆದ ಮಧ್ಯಪ್ರದೇಶದ ಜಬಲ್‌ಪುರ ಗಲಭೆಗಳು ಭಾರತದಲ್ಲಿ ಹಿಂದೂ ಮುಸ್ಲಿಂ ಸಮುದಾಯಗಳ ನಡುವಿನ ಆರ್ಥಿಕ ಪೈಪೋಟಿಗೆ ಕಾರಣವಾಗಿ ಘರ್ಷಣೆಗಳು ನಡೆದು ಸುಮಾರು 200 ಮಂದಿ ಕೊಲ್ಲಲ್ಪಟ್ಟರು'[12] '1969 ಗುಜರಾತ್‌ನಲ್ಲಿ ನಡೆದ ಹಿಂದೂ ಮುಸ್ಲಿಂ ಧಾರ್ಮಿಕ ಗಲಭೆಯಲ್ಲಿ ಸುಮಾರು 660 ಮಂದಿ ಮರಣ ಹೊಂದಿರುತ್ತಾರೆ'[13] '1984ರಲ್ಲಿಯೂ ಪಂಜಾಬಿನಲ್ಲಿ ಸಿಖ್ ಮತ್ತು ಹಿಂದೂಗಳ ನಡುವೆ ಘರ್ಷಣೆಗಳು ನಡೆದು ಅಪಾರ ಹಾನಿಯಾಯಿತು'[14] '1992ರಲ್ಲಿ ಸೂರತ್ತಿನಲ್ಲಿ ನಡೆದ ಹಿಂದೂ ಮುಸ್ಲಿಂ ನಡುವೆ ಬಾಬರಿ ಮಸೀದಿ ಮತ್ತು ರಾಮಜನ್ಮ ಭೂಮಿ ವಿವಾದದಲ್ಲಿ 200ಕ್ಕೂ ಹೆಚ್ಚು ಜನರ ಮರಣವಾಗಿದೆ. ಇದೇ ವಿವಾದಕ್ಕೆ ಸಂಬಂಧಿಸಿದಂತೆ ಬಾಬರಿ ಮಸೀದಿಯ ಧ್ವಂಸವನ್ನು ವಿರೋಧಿಸಿ 1992ರಲ್ಲಿ ಮುಂಬೈನಲ್ಲಿ ಹಿಂದೂ ಮುಸ್ಲಿಂರ ನಡುವಿನ ಪ್ರತಿಭಟನೆಯಲ್ಲಿ 900 ಜನರು ಮರಣ ಹೊಂದಿರುತ್ತಾರೆ'[15] '1994ರಲ್ಲಿ ಬೆಂಗಳೂರಿನಲ್ಲಿ ಹಿಂದೂ ಮುಸ್ಲಿಂರ ನಡುವಿನ ಘರ್ಷಣೆ, ದೂರದರ್ಶನ ಕಾರ್ಯಕ್ರಮ ಉರ್ದು ಭಾಷೆಯಲ್ಲಿ ಪ್ರಸಾರದ ಕಾರಣ 25 ಜನರ ಸಾವನಪ್ಪಿದ್ದಾರೆ'[16] '17 ಜೂನ್ 2024ರಲ್ಲಿ ತೆಲಂಗಾಣದ ಮೇದಕ್‌ನಲ್ಲಿ ಬಕ್ರೀದ್ ಹಬ್ಬದ ಪ್ರಯುಕ್ತ ಬಂಧಿಸಿದ್ದ ಗೋವುಗಳನ್ನು ಬಜರಂಗದಳದ ಕಾರ್ಯಕರ್ತರು ಬಿಡಿಸಿದ ಹಿನ್ನೆಲೆಯಲ್ಲಿ ನಡೆದ ಘರ್ಷಣೆಯಲ್ಲಿ 9 ಜನ ಬಿಜೆಪಿ ಮುಖಂಡರು ಸೇರಿ 13 ಜನರನ್ನು ಬಂಧಿಸಲಾಗಿತ್ತು. ಇದರ ಪರಿಣಾಮವಾಗಿ ಒಂದು ದಿನದ ಬಂದ್ ಕೂಡ ನಡೆಯಿತು'[17]

ಹೀಗೆಯೇ '2023 ರಲ್ಲಿ ಮಣಿಪುರದಲ್ಲಿ ನಡೆದ ಕುಕಿ ಮತ್ತು ಮೇಟಿ ಬುಡಕಟ್ಟು ಜನಾಂಗದವರ ನಡುವಿನ ಜನಾಂಗೀಯ ಹಿಂಸಾಚಾರ. ಇದು ಇಂಪಾಲ ಕಣಿವೆಯ ಮೇಟಿ ಸಮುದಾಯ ಮತ್ತು ಗುಡ್ಡಗಾಡು ನಿವಾಸಿಗಳಾದ ಕುಕಿ ಜನಾಂಗದವರ ನಡುವೆ ನಡೆದ ಘರ್ಷಣೆ. ಪರಸ್ಪರ ಕೊಲೆ ಮಾಡಿ, ಮನೆಗಳಿಗೆ ಬೆಂಕಿ ಹಚ್ಚುವ ಮೂಲಕ ಹಿಂಸಾತ್ಮಕವಾಗಿ ಪ್ರತಿಭಟಿಸಲಾಗಿದೆ'[18] ಆದ್ದರಿಂದ ಇಂತಹ ಸಾಮಾಜಿಕ ಶಾಂತಿಯನ್ನು ಹಾಳುಮಾಡುವಂತಹ ಮಾನವನು ರೂಪಿಸಿಕೊಂಡ ಕೆಟ್ಟ ಆಚಾರ ವಿಚಾರ, ಜಾತಿ, ಧರ್ಮ ಇವುಗಳು ತನ್ನ ಅಂತ್ಯವನ್ನು ಕಾಣುವಂತಾಗಬೇಕು. ಕೆಟ್ಟ, ದುಷ್ಟ ಪದ್ಧತಿಗಳನ್ನು ಅನುಸರಿಸದೆ ಮಾನವೀಯ ಮೌಲ್ಯಗಳಿಗೆ ಪ್ರಧಾನ ಆದ್ಯತೆಯನ್ನು ನೀಡುತ್ತಾ ಸ್ವಸ್ಥ ಸಮಾಜ ನಿರ್ಮಾಣಕ್ಕೆ ಮನುಷ್ಯ ಪ್ರಯತ್ನ ಮಾಡಬೇಕು.

ಸಮಾಜದ ಸ್ವಾಸ್ಥ್ಯವನ್ನು ಕದಡುವ ಮತ್ತು ಅಂತಹ ವಿಚಾರಗಳನ್ನು ಇಟ್ಟುಕೊಂಡು ಮಾನವನ ಮನಸ್ಸಿನಲ್ಲಿ ವಿಷಬೀಜ ಬಿತ್ತಿ ತನ್ನ ಬೆಳವಣಿಗೆಯನ್ನು ಮಾತ್ರ ನೋಡುವ ಹಲವು ಮನುಷ್ಯರು ನಮ್ಮ ಸುತ್ತ ಮುತ್ತ ಜೀವಿಸುತ್ತಿರುತ್ತಾರೆ ಎಂಬ ಎಚ್ಚರಿಕೆಯ ಸಂಗತಿ ಚಿಕ್ಕಪ್ಪ ಕಾದಂಬರಿಯಲ್ಲಿ ಬರುವ ಚಿಕ್ಕಪ್ಪ ಪಾತ್ರದ ಮೂಲಕ ನಮಗೆ ತಿಳಿಯುತ್ತದೆ. ಅಲ್ಲದೆ ಒಬ್ಬರನ್ನು ನೋಯಿಸಿ ತಾನು ಸಂತೋಷಿಸುವ ಮನುಷ್ಯರು

ದುರಂತ ಅಂತ್ಯ ಕಾಣುತ್ತಾರೆ ಎಂಬುದಕ್ಕೆ ಕಾದಂಬರಿಯ ಕೊನೆಯಲ್ಲಿ ಬರುವ ಚಿಕ್ಕಪ್ಪನ ಅವಸ್ಥೆ ಉದಾಹರಣೆಯಾಗಿದೆ. ಚಿಕ್ಕಪ್ಪ ಒಬ್ಬ ವ್ಯಕ್ತಿಯೂ ಹೌದು, ಸರ್ವಾಧಿಕಾರಿಯೂ ಹೌದು, ಪ್ರಜೆಯೂ ಹೌದು. ಆದಾಗ್ಯೂ, ಇಂತಹ ಗಲಭೆ, ಘರ್ಷಣೆಗಳು ಕಾದಂಬರಿಯಲ್ಲಿನ ಚಿಕ್ಕಪ್ಪನಂತೆಯೇ ಕೇವಲ ಅದಕ್ಕೆ ಕಾರಣಕರ್ತರಾದವರಿಗೆ ಮಾತ್ರವೇ ನೋವುಂಟು ಮಾಡುವುದಿಲ್ಲ. ಜೊತೆಗೆ ಮಾಳವಿಕಾಳ ಗಂಡ ರಶೀದ್ ನಂತಹ ಎಷ್ಟೋ ಮುಗ್ದ ಜನರೂ ಕೂಡ ಬಲಿಯಾಗುತ್ತಾರೆ. ಹಾಗಾಗಿ ಲೇಖಕರು ಚಿತ್ರಿಸಿರುವಂತೆ ಮನಃಪರಿವರ್ತನೆಯಾದ ಚಿಕ್ಕಪ್ಪನಂತೆ ಪ್ರಸ್ತುತ ನಮ್ಮ ಸಮಾಜದಲ್ಲಿನ ಅನೇಕ ಚಿಕ್ಕಪ್ಪನಂತಹ ವ್ಯಕ್ತಿಗಳು ಸಮಾಜದ ಒಳಿತಿಗಾಗಿ ಮನಃಪರಿವರ್ತನೆಯಾಗುತ್ತಾರೆಯೇ ಎಂಬುದು ವಾಸ್ತವದ ನೆಲೆಗಟ್ಟಿನಲ್ಲಿ ಭಾರತದ ಪ್ರತಿಯೊಬ್ಬ ಪ್ರಜೆಯೂ ಯೋಚಿಸಬೇಕಾದ ಸಂಗತಿಯಾಗಿದೆ.

**ಕೊನೆಟಿಪ್ಪಣಿಗಳು**

1. ಜೋಗಿ (ಗಿರೀಶ್ ರಾವ್ ಹತ್ವಾರ್). (2017). *ಚಿಕ್ಕಪ್ಪ.* ಪುಟ 7
2. ಅದೇ. ಪುಟ 10
3. ಅದೇ. ಪುಟ 16
4. ಅದೇ. ಪುಟ 27
5. ಅದೇ. ಪುಟ 43
6. ಅದೇ. ಪುಟ 57
7. ಬರಗೂರು ರಾಮಚಂದ್ರಪ್ಪ. (2012). *ಸಂಸ್ಕೃತಿ: ಶ್ರಮ ಮತ್ತು ಸೃಜನಶೀಲತೆ.* ಪುಟ 49
8. ಜೋಗಿ (ಗಿರೀಶ್ ರಾವ್ ಹತ್ವಾರ್). ಪೂರ್ವೋಕ್ತ. ಪುಟ 89
9. ಬರಗೂರು ರಾಮಚಂದ್ರಪ್ಪ. (2012). ಪೂರ್ವೋಕ್ತ. ಪುಟ 25
10. ನಾಯಕ ಜಿ. ಎಚ್. (2011). *ಮೌಲ್ಯ ಮಾರ್ಗ.* (ಸಂಪುಟ 4) ಪುಟ 9
11. https://en.m.wikipedia.org/wiki/Religious_violence_in_India
12. https://en.m.wikipedia.org/wiki/List_of_riots_in_India
13. https://en.m.wikipedia.org/wiki/List_of_riots_in_India
14. https://en.m.wikipedia.org/wiki/List_of_riots_in_India
15. https://en.m.wikipedia.org/wiki/List_of_riots_in_India
16. https://en.m.wikipedia.org/wiki/List_of_riots_in_India
17. https://www.Kannadaprabha.com.
18. https://en.willipedia.org.

**ಪರಾಮರ್ಶನ ಗ್ರಂಥಗಳು**


- ಕರೀಗೌಡ ಬೀಚನಹಳ್ಳಿ. (2011). ಶತಮಾನದ ಸಣ್ಣಕಥೆಗಳ ಸಮೀಕ್ಷೆ (ದ್ವಿತೀಯ ಮುದ್ರಣ). ಕರ್ನಾಟಕ ಸಾಹಿತ್ಯ ಅಕಾಡೆಮಿ.
- ನಾಯಕ, ಜಿ.ಎಚ್. (ಸಂ.) (2021). *ಕುವೆಂಪು, ಭಾವೈಕ್ಯತೆ: ಹೊಸಗನ್ನಡ ಕವಿತೆ.* (ಎರಡನೆಯ ಮುದ್ರಣ). ಅಭಿನವ ಪ್ರಕಾಶನ.

- ಜೋಗಿ (ಗಿರೀಶ್ ರಾವ್ ಹತ್ವಾರ್). (2017). *ಚಿಕ್ಕಪ್ಪ* (ದ್ವಿತೀಯ ಮುದ್ರಣ). ಅಂಕಿತ ಪ್ರಕಾಶನ. 2017
- ನಾಯಕ ಜಿ. ಎಚ್. (2011). *ಮೌಲ್ಯ ಮಾರ್ಗ.* (ಸಂಪುಟ 4). ಸಿರಿವರ ಪ್ರಕಾಶನ.
- ಪೋತೆ ಎಚ್. ಟಿ. (2007). *ವಿಚಾರ ಸಾಹಿತ್ಯ.* ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ.
- ಬರಗೂರು ರಾಮಚಂದ್ರಪ್ಪ (2012). *ಸಂಸ್ಕೃತಿ; ಶ್ರಮ ಮತ್ತು ಸೃಜನಶೀಲತೆ.* ಅಂಕಿತ ಪುಸ್ತಕ.
- ರಹಮತ್ ತರೀಕೆರೆ. (2019). *ಸಾಂಸ್ಕೃತಿಕ ಅಧ್ಯಯನ.* ಕರ್ನಾಟಕ ಸಾಹಿತ್ಯ ಅಕಾಡೆಮಿ.
- ರಾಮಚಂದ್ರನ್ ಸಿ ಎನ್. (2017). *ಸಮಕಾಲೀನ ತಲ್ಲಣಗಳು, ಚರಿತ್ರೆ, ಸಾಹಿತ್ಯ.* ಸಪ್ನ ಬುಕ್ ಹೌಸ್.